

ಸೆಲೆಬ್ರಿಟಿ

ಹನಿ

# ಗಾಯಕ ಮತ್ತು ನಾಯಕ

ಪಾಕಿಸ್ತಾನದಿಂದ ಗಾಯಕರು ಬಾಲಿವುಡ್‌ಗೆ ಪಯಣ ಬೆಳೆಸುವುದು ಹೊಸತೇನೂ ಅಲ್ಲ. 60ರ ದಶಕದಲ್ಲೇ ಜನಪ್ರಿಯರಾಗಿದ್ದ ಮೆಹ್ದಿ ಹಸನ್ ಮತ್ತು ಗುಲಾಮ್ ಅಲಿಯವರ ಗಝಲ್‌ಗಳು ಬಾಲಿವುಡ್ ಸಿನಿಮಾಗಳಲ್ಲಿ ಸಾಕಷ್ಟು ಮಿಂಚಿದ್ದುಂಟು. 90ರ ದಶಕದಲ್ಲಿ ನುಸ್ರತ್ ಫತೇ ಅಲಿ ಖಾನ್ ಅವರಂತೂ ಒಂದರ ಹಿಂದೆ ಒಂದರಂತೆ ಹಿಂದಿ ಸಿನಿಮಾಗಳಲ್ಲಿ ಹಾಡತೊಡಗಿದರು. ಅವರ ನಿಧನದ ಬಳಿಕ ರಾಹತ್ ಫತೇ ಅಲಿ ಖಾನ್ ಜನಪ್ರಿಯರಾದರು. ಈ ಮಧ್ಯೆ ಅಡ್ನಾನ್ ಸಾಮಿ ಮತ್ತು ಅಲಿ ಜಾಫರ್ ಬಾಲಿವುಡ್‌ನಲ್ಲಿ ಸಂಗೀತದ ದೊಡ್ಡ ಅಲೆಯನ್ನೇ ಎಬ್ಬಿಸಿದರು. ಈ ಸಾಲಿನಲ್ಲೇ ಇದೀಗ ಮಿಂಚುತ್ತಿರುವ ಗಾಯಕ ಆತಿಫ್ ಅಸ್ಲಾಂ. ಮೂರು ವರ್ಷಗಳ ಹಿಂದೆ 'ಸುರ್‌ಕ್ಷೇತ್ರ' ಎಂಬ ಜನಪ್ರಿಯ ಟೀವಿ ಷೋ ಒಂದರಲ್ಲಿ ಗಾಯನ ಪ್ರತಿಭೆಗಳ ಸ್ಪರ್ಧೆ ಏರ್ಪಟ್ಟಾಗ ಭಾರತದ ಗಾಯಕರ ತಂಡಕ್ಕೆ ಹಿಮೇಶ್ ರೇಶಮಿಯಾ ನಾಯಕರಾಗಿದ್ದರೆ, ಪಾಕಿಸ್ತಾನಿ ಗಾಯಕರ ತಂಡವನ್ನು ಇದೇ ಆತಿಫ್ ಅಸ್ಲಾಂ ಮುನ್ನಡೆಸಿದ್ದರು. ಸ್ಪರ್ಧೆಯಲ್ಲಿ ಪಾಕಿಸ್ತಾನ ತಂಡವೇ ಜಯ ಗಳಿಸಿತು. ಅದಾಗಲೇ ಮಹೇಶ್ ಭಟ್‌ರ 'ಜೆಹೆರ್' ಚಿತ್ರದಲ್ಲಿ 'ವೋ ಲಮ್ಹೇ' ಎಂಬ ಹಾಡಿನ ಮೂಲಕ ಸೂಪರ್‌ಹಿಟ್ ಗಾಯಕನಾಗಿದ್ದ ಆತಿಫ್ ಒಂದೊಂದಾಗಿ ಅವಕಾಶಗಳ ಮೆಟ್ಟಿಲೇರಿದ. ಈಗಂತೂ ಅಕ್ಷಯ ಕುಮಾರ್, ಸೈಫ್ ಅಲಿ ಖಾನ್ ಮತ್ತು ರಣಬೀರ್ ಕಪೂರ್ ಅವರ ಸಿನಿಮಾಗಳಲ್ಲಿ ಆತಿಫ್‌ನ ಒಂದು ಹಾಡು ಇರಲೇಬೇಕು ಎನ್ನುವುದು ನಿಯಮವಾದಂತಿದೆ. ರೊಮ್ಯಾಂಟಿಕ್ ಮತ್ತು ನೋವು ತುಂಬಿರುವ ಧ್ವನಿ ಬೇಕೆಂದವರೆಲ್ಲ ಆತಿಫ್‌ನನ್ನೇ ಹುಡುಕಿಕೊಂಡು ಬರುತ್ತಿದ್ದಾರೆ.

ಮುಂಬೈ, ದೆಹಲಿ, ಕೋಲ್ಕತ್ತಾಗಳಲ್ಲಿ ಲೈವ್ ಷೋ ನಡೆಸಿ ಮಿಂಚಿದ ಆತಿಫ್‌ಗೆ ಕಳೆದ ವಾರ ಪುಣೆಯಲ್ಲಿ ಲೈವ್ ಷೋ ನಡೆಸಲು ಶಿವಸೇನೆಯ ಮುಖಂಡರು ಬಿಡಲಿಲ್ಲ. 'ಪಾಕಿಸ್ತಾನದಿಂದ ಬರುವ ಯಾವ ಗಾಯಕರೂ ಇಲ್ಲಿ ಹಾಡುವಂತಿಲ್ಲ' ಎಂದು ಶಿವಸೇನೆಯವರು ಧಮಕಿ ಹಾಕಿದ್ದರಿಂದ, ಸ್ಥಳೀಯ ಸಂಘಟಕರು ಹೆದರಿ ಕಾರ್ಯಕ್ರಮವನ್ನೇ ರದ್ದು ಮಾಡಿದರು. ಎರಡು ತಿಂಗಳ ಹಿಂದೆ ದೆಹಲಿ ವಿಶ್ವವಿದ್ಯಾಲಯದ ಶ್ರೀರಾಮ ಕಾಮರ್ಸ್ ಕಾಲೇಜಿನಲ್ಲಿ ಸಂಗೀತ ಕಾರ್ಯಕ್ರಮ ಕೊಟ್ಟಿದ್ದ ಆತಿಫ್ ಇದರಿಂದ ತೀವ್ರ ನೊಂದಿದ್ದಾನೆ. 'ಯಾರು ಹಾಡಲು ಕರೆದರೂ ನಾನು ಹೋಗುತ್ತೇನೆ. ನನಗೆ ಭಾರತದಲ್ಲಿರಲು ತುಂಬ ಖುಷಿ. ನಾನು ಸಂಗೀತಗಾರ. ಎಲ್ಲರ ಸಲುವಾಗಿ ಹಾಡುತ್ತೇನೆ, ಹಿಂದೂ–ಮುಸ್ಲಿಂ ಎಂದು ನಾನು ಹಾಡುವುದಿಲ್ಲ' ಎಂದಿದ್ದಾನೆ ಆತಿಫ್. ಹಾಗೆಂದು ಆತನ ಜನಪ್ರಿಯತೆಯೇನೂ ಕುಂದಿಲ್ಲ. ಇತ್ತೀಚೆಗಷ್ಟೇ ಆತ ಟೈಗರ್ ಶ್ರಾಫ್ ಸಲುವಾಗಿ ಹಾಡಿದ 'ಜಿಂದಗಿ ಆ ರಹಾ ಹೂ ಮೈ' ಎಂಬ ಹಾಡು ಯೂಟ್ಯೂಬ್‌ನಲ್ಲಿ 10 ಲಕ್ಷ ಹಿಟ್‌ಗಳನ್ನು ಕಂಡಿದೆ. 2004ರಲ್ಲಿ 'ಜಾಲ್ ಪರಿ' ಮ್ಯೂಸಿಕ್ ಆಲ್ಬಂ ಮೂಲಕ ಮೊದಲ ಹೆಜ್ಜೆ ದಾಖಲಿಸಿದ ಈತ 2008ರಲ್ಲಿ 'ಮೇರಿ ಕಹಾನಿ' ಆಲ್ಬಂ ಮೂಲಕ ಇನ್ನಷ್ಟು ಜನಪ್ರಿಯನಾದ. 'ನನ್ನ ಬಳಿ ಸುಮಾರು 150ರಷ್ಟು ಹಾಡುಗಳು ಸ್ಟಾಕ್ ಇವೆ. ಆದರೆ ಇತ್ತೀಚೆಗೆ ಜನರ ಅಭಿರುಚಿ ಬದಲಾಗಿದೆ. 5–6 ಹಾಡುಗಳ ಆಲ್ಬಂ ಬದಲು ಒಂದೇ ಹಾಡನ್ನು ಇಷ್ಟ ಪಡುವವರ ಸಂಖ್ಯೆ ಹೆಚ್ಚಾಗಿದೆ. ಹಾಗೆಂದೇ ನಾನು ಇಂತಹ ಏಕೈಕ ಹಾಡುಗಳ ಕಡೆಗೇ ಗಮನ ಕೊಡುತ್ತಿದ್ದೇನೆ' ಎಂದಿದ್ದಾನೆ ಆತಿಫ್.

ನೋಡಲು ಸ್ಫುರದ್ರೂಪಿಯಾಗಿರುವ ಈತನಿಗೆ ಬಾಲಿವುಡ್ ಚಿತ್ರಗಳಲ್ಲಿ ನಟಿಸಲೂ ಆಹ್ವಾನ ಬಂದಿದೆಯಂತೆ. 'ಈ ವರ್ಷದ ಕೊನೆಯಲ್ಲಿ ನನ್ನ ಸಿನಿಮಾ ಸೆಟ್ಟೇರಬಹುದು' ಎಂದಿದ್ದಾನೆ. ಪಾಕಿಸ್ತಾನದಲ್ಲಿ ಈತ ನಟಿಸಿದ 'ಬೋಲ್' ಎನ್ನುವ ಸಿನಿಮಾ 2011ರಲ್ಲಿ ಬಿಡುಗಡೆಯಾಗಿ ಜನಪ್ರಿಯವಾಗಿತ್ತು. ಬಾಲಿವುಡ್‌ನಲ್ಲಿ ಗಾಯಕರೇ ನಾಯಕರಾಗುವುದು ಹೊಸತೇನಲ್ಲ. ಸುರೈಯ, ಕೆ.ಎಂ.ಸೆಹಗಲ್, ಕಿಶೋರ್‌ಕುಮಾರ್ ಮುಂತಾದ ಹಳಬರಲ್ಲದೆ, ಸೋನು ನಿಗಮ್, ಲಕ್ಕಿ ಅಲಿ, ಹಿಮೇಶ್ ಮುಂತಾದವರೆಲ್ಲ ಇಂತಹ ಪ್ರಯೋಗ ನಡೆಸಿದ್ದಾರೆ. ಎರಡು ಬಾರಿ ಫಿಲಂಫೇರ್ ಪ್ರಶಸ್ತಿಗೆ ನಾಮಕರಣಗೊಂಡ ಮೊದಲ ಪಾಕಿಸ್ತಾನಿ ಗಾಯಕನೀತ. ಈತ ಹಾಲಿವುಡ್ ಚಿತ್ರವೊಂದಕ್ಕೂ ಮೂರು ಹಾಡುಗಳನ್ನು ಹಾಡಿದ್ದು ಅವುಗಳಿಗೆ ಪ್ರಶಸ್ತಿಯೂ ಲಭಿಸಿದೆ.

ವಜೀರಾಬಾದ್‌ನಲ್ಲಿ ಜನಿಸಿದ ಆತಿಫ್ ಹೈಸ್ಕೂಲ್‌ನಲ್ಲಿದ್ದಾಗ ಚೆನ್ನಾಗಿ ಕ್ರಿಕೆಟ್ ಆಡುತ್ತಿದ್ದ. ಪಾಕಿಸ್ತಾನದ 19 ವರ್ಷ ಕೆಳಗಿನವರ ತಂಡದಲ್ಲಿ ವೇಗದ ಬೌಲರ್ ಆಗಿದ್ದ. ಆದರೆ ಸ್ನೇಹಿತರು ಈತನ ಹಾಡುಗಳಿಗೆ ಮುಗಿಬೀಳುತ್ತಿದ್ದರು. ಸ್ಥಳೀಯ ಕಾರ್ಯಕ್ರಮಗಳಲ್ಲಿ ಜನಪ್ರಿಯನಾದ. ವ್ಯಾನ್ ಡ್ರೈವರ್ ಆಗಿ ದುಡಿದು 15 ಸಾವಿರ ರೂಪಾಯಿ ಸೇರಿಸಿ, 'ಆದತ್' ಎಂಬ ಆಲ್ಬಂ ಒಂದನ್ನು ಹೊರತಂದದ್ದೇ ಈತನ ಬದುಕಿನ ದಿಕ್ಕು ಬದಲಾಯಿತು. ಆ ಆಲ್ಬಂ ದಿನ ಬೆಳಗಾಗುವುದರೊಳಗೆ ಸೂಪರ್ ಹಿಟ್ ಆಗಿ, ಕ್ರಿಕೆಟ್‌ಗೆ ಟಾಟಾ ಹೇಳಿದ. ಈಗ ಬಾಲಿವುಡ್‌ನಲ್ಲಿ ಹೊಸ ತಲೆಮಾರಿನ ನಾಯಕರಿಗೆಲ್ಲ ಈತನ ಕಂಠವೇ ಅಚ್ಚುಮೆಚ್ಚು. ಅಭಿಮಾನಿಗಳು ಈತನ ನಟನೆಯ ಸಿನಿಮಾಕ್ಕಾಗಿ ಎದುರು ನೋಡುತ್ತಿದ್ದಾರೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65